ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಕರ್ನಾಟಕ ಸರ್ಕಾರ

ದೂರವಾಣಿ : 080-22252078
080-22033749
ಫ್ಯಾಕ್ಸ್ : 080-22256360
e-mail: prs-fd@karnataka.gov.in
ಕೊಠಡಿ ಸಂಖ್ಯೆ 255, 2ನೇ ಮಹಡಿ
ವಿಧಾನ ಸೌಧ
ಬೆಂಗಳೂರು – 560001

ಅ.ಸ.ಪ. ಸಂಖ್ಯೆ: ಆಇ 47 ವೆಚ್ಚ-6 2020 20ನೇ ಮಾರ್ಚ್, 2020

ಮಾನ್ಯರೇ,

ವಿಷಯ: ರಾಜ್ಯ ಹಾಗೂ ಜಿಲ್ಲಾ ವಲಯಗಳಲ್ಲಿ ತಿಂಗಳುವಾರು ವೇತನ ಬಾಕಿ ಇರುವ ಬಗ್ಗೆ.

* * * *

ಸರ್ಕಾರದ ಮುಖ್ಯಕಾರ್ಯದರ್ಶಿಗಳು ಇತ್ತೀಚೆಗೆ ಹೊರಡಿಸಿರುವ ಸುತ್ತೋಲೆಯನ್ವಯ ಯಾವುದೇ ಕಾರಣಕ್ಕೂ ನೌಕರರ ವೇತನವನ್ನು ಪ್ರತಿ ತಿಂಗಳು ಪಾವತಿಸದಿದ್ದ ಪಕ್ಷದಲ್ಲಿ ಮತ್ತು ಆಯಾ ತಿಂಗಳ ವೇತನವನ್ನು 5ನೇ ತಾರೀಕಿನೊಳಗೆ ನೌಕರರುಗಳಿಗೆ ಪಾವತಿಸದಿದ್ದಲ್ಲಿ ಸಂಬಂಧಿಸಿದ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಜವಾಬ್ದಾರರಾಗಿರುತ್ತಾರೆ ಎಂಬ ಸೂಚನೆಯನ್ನು ನೀಡಿರುತ್ತಾರೆ. ಅಲ್ಲದೇ, ಆರ್ಥಿಕ ಇಲಾಖೆಯು ಸಹ ಆಇ 06 ಬಿಪಿಇ 2019, ದಿನಾಂಕ: 03.01.2020ರ ಸುತ್ತೋಲೆಯಲ್ಲಿ ನೀಡಿರುವ ಸೂಚನೆಗಳತ್ತ ಗಮನ ಸೆಳೆದಿದೆ.

ಆರ್ಥಿಕ ಇಲಾಖೆಯು ಆಯವ್ಯಯವನ್ನು ತಯಾರಿಸುವ ಸಂದರ್ಭದಲ್ಲಿ ಹೆಚ್.ಆರ್.ಎಂ.ಎಸ್. ಅಂಕಿಅಂಶಗಳ ಆಧಾರದ ಮೇಲೆ ಅಂದರೆ ಆಗಸ್ಟ್-ನವೆಂಬರ್‌ರವರೆಗಿನ ವೆಚ್ಚವನ್ನಾಧರಿಸಿ ವಾರ್ಷಿಕ ವೆಚ್ಚಕ್ಕೆ 15 ದಿನಗಳ ಗಳಿಕೆ ರಜೆ ನಗದೀಕರಣ ಮತ್ತು ಮುಂದಿನ ಆರ್ಥಿಕ ವರ್ಷದಲ್ಲಿ ಮಂಜೂರು ಮಾಡಬಹುದಾದ ತುಟ್ಟಿ ಭತ್ಯೆ ಹೆಚ್ಚಳವನ್ನು ಅಂದಾಜಿಸಿ ವೇತನಾಂಶಕ್ಕೆ ಅನುದಾನವನ್ನು ಒದಗಿಸಲಾಗುತ್ತದೆ. ಆದಾಗ್ಯೂ ಬಹುತೇಕ ಇಲಾಖೆಗಳು ವೇತನ ವೆಚ್ಚಕ್ಕಾಗಿ ಹೆಚ್ಚುವರಿ ಅನುದಾನವನ್ನು ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿರುವುದನ್ನು ಪರಿಶೀಲಿಸಲಾಗಿ, ಹಿಂದಿನ ಸಾಲಿನ ವರ್ಷಾಂತ್ಯದಲ್ಲಿ ಅನುದಾನ ಲಭ್ಯವಿದ್ದರೂ ವೇತನವನ್ನು ಸೆಳೆಯದೇ ವ್ಯಪಗತವಾಗುತ್ತಿರುವುದು ಕಂಡುಬಂದಿರುತ್ತದೆ. ಇದು ಅಷ್ಟು ಸಮಂಜಸವೆನಿಸುವುದಿಲ್ಲ. ಸಾಕಷ್ಟು ಅನುದಾನ ಲಭ್ಯತೆ ಇದ್ದರೂ, ಹೆಚ್ಚುವರಿ ಅನುದಾನ ಕೋರಿದಾಗ ವೇತನಕ್ಕಾಗಿ ಆರ್ಥಿಕ ಇಲಾಖೆಯು ಅನುದಾನ ಒದಗಿಸಿದ್ದಾಗ್ಯೂ, ರಾಜ್ಯದಲ್ಲಿ ಕೆಲವು ಇಲಾಖೆಗಳಲ್ಲಿ ರಾಜ್ಯ ಹಾಗೂ ಜಿಲ್ಲಾವಲಯಗಳಲ್ಲಿ ತಿಂಗಳುವಾರು ವೇತನ ಬಾಕಿ ಇರುವ ಬಗ್ಗೆ ವರದಿಗಳು ಆಗಿಂದಾಗ್ಗೆ ಬರುತ್ತಲಿವೆ. ಇದಕ್ಕೆ ಪ್ರಮುಖ ಕಾರಣ ಸಮಯದಲ್ಲಿ ವೇತನವನ್ನು ವಿತರಿಸದೇ ಇರುವುದು, ಅಂದರೆ ಕಳೆದ ಆರ್ಥಿಕ ವರ್ಷಾಂತ್ಯದ (2018-19ನೇ ಸಾಲಿನ) ಮಾಹೆಗಳಿಗೆ ಡಿಸೆಂಬರ್-2018, ಜನವರಿ-2019 ಮತ್ತು ಫೆಬ್ರವರಿ-2019 ಮಾಹೆಗಳ ವೇತನಗಳ ನಂತರದ ಸಾಲಿನಲ್ಲಿ ಅಂದರೆ 2019-20ನೇ ಆರ್ಥಿಕ ಸಾಲಿನಲ್ಲಿ ಸೆಳೆದಿರುವುದು ಕಂಡುಬಂದಿರುತ್ತದೆ ಹಾಗೂ ಅದರಿಂದಾಗಿಯೇ 2019-20ನೇ ಪ್ರಸಕ್ತ ಸಾಲಿನಲ್ಲಿಯೂ ಕೊರತೆಯಾಗಲು ಕಾರಣವಾಗಿದೆ.

. . . 2

ಅಲ್ಲದೇ, ಮೂಲವಾಗಿ ಆದಾಯ ತೆರಿಗೆ ಲೆಕ್ಕಚಾರವನ್ನು ಕ್ಲುಪ್ತ ಸಮಯದಲ್ಲಿ ಮಾಡದೇ ಇರುವುದು, ಮುಂಬಡ್ತಿ, ಕಾಲಬದ್ಧಬಡ್ತಿಗಳನ್ನು ಸಕಾಲದಲ್ಲಿ ನೀಡದೇ ಇರುವುದು, ಹೊಸದಾಗಿ ಹುದ್ದೆಗಳನ್ನು ಭರ್ತಿಗೊಳಿಸಿದಾಗ ಸಿಬ್ಬಂದಿಗೆ ಅವಶ್ಯವಾದ ಅನುದಾನವನ್ನು ಕೋರಿ ಈಗಾಗಲೇ ಆರ್ಥಿಕ ಇಲಾಖೆ ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಆಇ 321 ವೆಚ್ಚ-6 2019 ದಿನಾಂಕ: 29.05.2019ರನ್ವಯ ಮಾಹಿತಿ ನೀಡದೇ ಅನುದಾನ ಕೋರದೇ ಇರುವ ಪ್ರಕರಣಗಳಲ್ಲಿ ಸಕಾಲದಲ್ಲಿ ವೇತನ ನಿಗದಿಪಡಿಸಿ ಪಾವತಿಸದಿರುವುದು, ತತ್ಪರಿಣಾಮವಾಗಿ ಬಾಕಿ ವೇತನ ಒಂದೇ ಬಾರಿಗೆ ಸೂಕ್ತ ಅನುದಾನ ಪಡೆಯದೇ ಸೆಳೆಯುವುದು ಹಾಗೂ ಸೂಕ್ತ ಆಡಳಿತಾತ್ಮಕ ಕ್ರಮಗಳನ್ನು ಪಾಲಿಸದೇ ಇರುವುದು, ಸಕಾಲದಲ್ಲಿ ಬಿಲ್ಲುಗಳನ್ನು ತಯಾರಿಸಿ ಸಲ್ಲಿಸದಿರುವುದು, ಹೊಸ ತಂತ್ರಾಂಶದಲ್ಲಿ ಕಾರ್ಯನಿರ್ವಹಿಸಲು ನಿರ್ಲಕ್ಷ ತೋರುವುದು ಮುಂತಾದ ಕಾರಣಗಳು ಈ ಸಮಸ್ಯೆಗೆ ಕಾರಣವಾಗಿವೆ. ಇದಕ್ಕೆ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಹೊಣೆಗಾರರಾಗಿರುತ್ತಾರೆ. ಈ ಬಗ್ಗೆ ಖಜಾನೆಗಳಿಂದ ಸ್ವೀಕೃತವಾಗಿರುವ ಅಂಕಿ ಅಂಶಗಳನ್ನು ಪರಿಶೀಲಿಸಲಾಗಿ ಆರ್ಥಿಕ ವರ್ಷಾಂತ್ಯದಲ್ಲಿ ಅನುದಾನಗಳು ವೆಚ್ಚವಾಗದೆ ವ್ಯಪಗತವಾಗುತ್ತಿರುವುದನ್ನು ಗಮನಿಸಿದೆ. ಈ ವ್ಯಪಗತವಾಗುವ ಅನುದಾನದ ಬಗ್ಗೆ ಮಹಾಲೇಖಪಾಲರ ಆಕ್ಷೇಪಣೆಗೆ ಗುರಿಯಾಗಬೇಕಾಗುತ್ತದೆ.

ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ರಾಜ್ಯವಲಯದ ಹಾಗೂ ಎಲ್ಲಾ ಜಿಲ್ಲಾ/ತಾಲ್ಲೂಕು ಪಂಚಾಯಿತಿಗಳ ಸಿಸಿಓ, ಸಿಓ ಮತ್ತು ಡಿಡಿಓಗಳು ವೇತನದ ಬಿಲ್ಲುಗಳ ತೀರುವಳಿ ಬಗ್ಗೆ ವಿಶೇಷ ಗಮನಹರಿಸಿ ಕ್ರಮವಹಿಸತಕ್ಕದ್ದು.

1. ಪ್ರತಿ ಅರ್ಥಿಕ ಸಾಲಿನಲ್ಲಿ ಫೆಬ್ರವರಿ ತಿಂಗಳ ವೇತನವನ್ನು ಮುಂದಿನ ಆರ್ಥಿಕ ಸಾಲಿಗೆ ಮುಂದೂಡದೇ ಕಡ್ಡಾಯವಾಗಿ ಅದೇ ಆರ್ಥಿಕ ಸಾಲಿನಲ್ಲಿ ಸೆಳೆಯುವುದು. ತುಟ್ಟಿ ಭತ್ಯೆ ಬಾಕಿ ಹೊರತು ಪಡಿಸಿ ಹಿಂದಿನ ವರ್ಷದ / ವರ್ಷಗಳ ವೇತನ ಬಾಕಿಯನ್ನು ಸೆಳೆಯಲು ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆಯತಕ್ಕದ್ದು. ಅನುದಾನ ಲಭ್ಯವಿದ್ದರೂ ಅನುದಾನ ಲಭ್ಯವಿಲ್ಲವೆಂದು ನೌಕರರ ವೇತನವನ್ನು ಸೆಳೆಯದಿರುವುದನ್ನು ಗಂಭೀರ ಕರ್ತವ್ಯ ಲೋಪವೆಂದು ಪರಿಗಣಿಸಲಾಗುತ್ತದೆ. ಸಿಸಿಓ/ಸಿಓ ಗಳು ಬಿಡುಗಡೆ ಮಾಡದೆ ಅವರಲ್ಲಿಯೇ ಅನುದಾನ ಉಳಿಸಿಕೊಳ್ಳತಕ್ಕದ್ದಲ್ಲ. ಡಿಡಿಓ ವಾರು ಸರ್ಕಾರದ ಆದೇಶದಲ್ಲಿದ್ದಂತೆ ಅಷ್ಟು ತಿಂಗಳುಗಳಿಗೂ ಒಂದೇ ಬಾರಿಗೆ ಅನುದಾನ ಬಿಡುಗಡೆ ಮಾಡಬೇಕು. ಪ್ರತಿ ತಿಂಗಳೂ ಪ್ರತ್ಯೇಕವಾಗಿ ಬಿಡುಗಡೆ ಮಾಡುವುದು ಸರಿಯಾದ ಕ್ರಮವಲ್ಲ.

2. ಅಧೀನ ಅಧಿಕಾರಿ/ಸಿಬ್ಬಂದಿಯವರುಗಳು ಆದಾಯ ತೆರಿಗೆ ವಿವರಗಳನ್ನು ಸಲ್ಲಿಸಿಲ್ಲ ಎಂಬ ಕಾರಣಕ್ಕೆ ವೇತನವನ್ನು ಸೆಳೆಯದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸಂಬಂಧಿಸಿದ ವಿಷಯ ನಿರ್ವಾಹಕರು ವಾರ್ಷಿಕ ಪಾವತಿಸುವ, ಆದಾಯ ತೆರಿಗೆ ನಿಯಮಗಳಡಿ ನೀಡಬಹುದಾದ ವಿನಾಯಿತಿ ಹಾಗೂ ಪಾವತಿಸಬೇಕಾದ ಆದಾಯ ತೆರಿಗೆಗಳನ್ನು ಕ್ಲುಪ್ತ ವೇಳೆಯಲ್ಲಿ ಲೆಕ್ಕಾಚಾರ ಮಾಡಿ, ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಯವರುಗಳು ನಿಗದಿತ ವೇಳೆಯೊಳಗೆ ವಿವರಗಳನ್ನು ಸಲ್ಲಿಸದಿದ್ದಲ್ಲಿ ಲೆಕ್ಕಾಚಾರದಂತೆ ಕಟಾಯಿಸಿ ವೇತನವನ್ನು ಸೆಳೆಯಲಾಗುವುದೆಂದು ತಿಳಿಸತಕ್ಕದ್ದು.

. . 3

ಸಿಬ್ಬಂದಿಯು ಮಾಹಿತಿ ನೀಡುವುದನ್ನು ಕಾಯದೇ ನಿಯಮಾನುಸಾರ ಕಡಿತಗೊಳಿಸಿ ವೇತನ ಪಾವತಿಸತಕ್ಕದ್ದು. ಇದರಲ್ಲಿ ವಿಳಂಬ/ಕಟಾಯಿಸಿ ಸಂಬಂಧಿಸಿದ ಇಲಾಖೆಗೆ ವರದಿಯನ್ನು ಸಲ್ಲಿಸದಿದ್ದಲ್ಲಿ ಸಂಬಂಧಿಸಿದ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳೇ ಪೂರ್ಣ ಹೊಣೆಗಾರರಾಗುತ್ತಾರೆ. ಅಲ್ಲದೇ, ನಿಯಮಾನುಸಾರ ಆದಾಯ ತೆರಿಗೆಯನ್ನು ಕಟಾಯಿಸದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿಯಮಗಳಲ್ಲಿ ಅವಕಾಶವಿರುತ್ತದೆ.

3. ವೇತನದ ಬಿಲ್ಲುಗಳನ್ನು ತಪ್ಪದೇ ಪೂರ್ಣ ವಿವರಗಳೊಂದಿಗೆ ಖಜಾನೆಗಳಿಗೆ ಪ್ರತಿ ತಿಂಗಳ ಕೊನೆಯ ವಾರದಲ್ಲಿ ದಿನಾಂಕ:26 ರಿಂದ 28ರೊಳಗೆ ಸಲ್ಲಿಸತಕ್ಕದ್ದು. ಕೆಲವು ಅಧಿಕಾರಿ / ಸಿಬ್ಬಂದಿಯವರುಗಳು ಕಾಯ್ದಿರಿಸಿದ ಅವಧಿಯ ವೇತನವನ್ನು ಸ್ಥಳ ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಆಯವ್ಯಯ ತಯಾರಿಕೆಯ ವೇಳೆಯಲ್ಲಿ ಲೆಕ್ಕಾಚಾರ ಮಾಡದಿದ್ದರೂ ಲಭ್ಯವಿರುವ ಅನುದಾನದಿಂದ ಸೆಳೆಯುತ್ತಿರುವುದು ಕಂಡು ಬರುತ್ತದೆ. ಇದರಿಂದ ವೇತನಕ್ಕೆ ಲೆಕ್ಕಾಚಾರ ಮಾಡಿ ಒದಗಿಸಿರುವ ಅನುದಾನದಲ್ಲಿ ಕೊರತೆಯಾಗುತ್ತದೆ. ವರ್ಗಾವಣೆಯಾಗಿ ಬಂದ ಸ್ಥಳದಲ್ಲಿ ಬಾಕಿ ವೇತನವನ್ನು ಸೆಳೆಯುವುದು ಸರಿಯಾದ ಕ್ರಮವಲ್ಲ. ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸದೆ ಲಭ್ಯವಿರುವ ಅನುದಾನದಿಂದ ಬಾಕಿ ವೇತನವನ್ನು ಪಾವತಿಸುತ್ತಿರುವುದು ಸರಿಯಾದ ಕ್ರಮವಲ್ಲ. **ಆದುದರಿಂದ ಬಾಕಿ ವೇತನವನ್ನು ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುದಾನ ಒದಗಿಸಿದ ನಂತರವೇ ಸೆಳೆಯತಕ್ಕದ್ದು, ಇಲ್ಲವೇ, ಪ್ರಸ್ತುತ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾದ ಪೂರ್ವದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕಛೇರಿಗಳಲ್ಲೇ ಬಾಕಿ ವೇತನವನ್ನು ಸೆಳೆದು ತದನಂತರ ಪ್ರಸ್ತುತ ಸ್ಥಳದಲ್ಲಿ ವೇತನವನ್ನು ಸೆಳೆಯತಕ್ಕದ್ದು.**

4. **6ನೇ ವೇತನ ಆಯೋಗದ ಶಿಫಾರಸ್ಸಿನ ಪ್ರಕಾರ ಸಾಮಾನ್ಯವಾಗಿ ಅನ್ವಯವಾಗುವ ಭತ್ಯೆಗಳನ್ನು ವೇತನಕ್ಕೆ ಸೇರಿಸಿ ಒದಗಿಸಲಾಗುವುದರಿಂದ ಯಾವುದೇ ಇಲಾಖೆ ವಿಶೇಷವಾಗಿ ಭತ್ಯೆಗಳನ್ನು ನೀಡುತ್ತಿದ್ದಲ್ಲಿ ಅದನ್ನು ಸೂಕ್ತ ದಾಖಲೆಗಳೊಂದಿಗೆ ಗಣಕ ಕೋಶಕ್ಕೆ ಸಲ್ಲಿಸಿ ಒದಗಿಸಿಕೊಳ್ಳುವುದು.**

5. ಖಜಾನೆಗಳು ಈ ರೀತಿ ಡಿ.ಡಿ.ಓ.ಗಳು ಸಲ್ಲಿಸಿದ ವೇತನದ ಬಿಲ್ಲುಗಳನ್ನು 3 ದಿನಗಳೊಳಗೆ ಪೂರ್ಣಗೊಳಿಸುವುದು/ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನೇರವಾಗಿ ಡಿ.ಡಿ.ಓ.ಗಳ ಗಮನಕ್ಕೆ ತಂದು ಹಿಂದಿರುಗಿಸುವುದು. ಖಜಾನೆ ಆಕ್ಷೇಪಣೆಗಳೊಂದಿಗೆ ಹಿಂದಿರುಗಿಸಲಾದ ಬಿಲ್ಲುಗಳ ಆಕ್ಷೇಪಣೆಗಳಿಗೆ ನಿಯಮಾನುಸಾರ ಸಮಜಾಯಿಷಿಯನ್ನು ನೀಡಿ ವೇತನ ಬಿಲ್ಲುಗಳು ಆದ್ಯತೆ ಮೇಲೆ ತೀರುವಳಿಗೊಳಿಸಿಕೊಳ್ಳತಕ್ಕದ್ದು. ಯಾವುದೇ ಕಾರಣಕ್ಕೂ ವಿಳಂಬಕ್ಕೆ **ಆಸ್ಪದನೀಡಬಾರದು.**

6. ಇತ್ತೀಚಿನ ದಿನಗಳಲ್ಲಿ ಖಜಾನೆ-2ರ ಬಿಲ್ಲುಗಳು ತೀರುವಳಿಗೊಳ್ಳುತ್ತಿಲ್ಲವೆಂಬುದು ಸಾಮಾನ್ಯ ದೂರು. ಆದರೆ ಈ ಬಗ್ಗೆ ಖಜಾನೆ-2ರ ಗಮನಕ್ಕೆ ಯಾವುದೇ ಅಂಶಗಳನ್ನು ತರದಿರುವುದು ಕಂಡುಬರುತ್ತದೆ. ಖಜಾನೆ-2 ಪ್ರಕ್ರಿಯೆಯಲ್ಲಿ ಯಾವುದೇ ಸಮಸ್ಯೆಯಾದರೆ ಕೂಡಲೇ ಸಂಬಂಧಿಸಿದ ಡಿ.ಡಿ.ಓ.ಗಳು ಕೂಡಲೇ ಖಜಾನೆ-2ರ ಪ್ರಾಜೆಕ್ಟ್ ಡೈರಕ್ಟರ್ ರವರ ಅವಗಾಹನೆಗೆ ತಂದು ಸಮಸ್ಯೆಗಳನ್ನು ನಿವಾರಿಸಿಕೊಳ್ಳತಕ್ಕದ್ದು.

7. **<u>ಯಾವುದೇ ಕಾರಣಕ್ಕೂ ಮುಂದಿನ ವರ್ಷದ ಅವಧಿಗೆ ಬಿಡುಗಡೆಗೊಳಿಸಿದ ಅನುದಾನದಲ್ಲಿ ಹಿಂದಿನ ವರ್ಷದ (ಮಾರ್ಚ್ 2020ರ ಹಿಂದಿನ ಅವಧಿ) ಬಾಕಿ ವೇತನವನ್ನು ಸೆಳೆಯದೆ ಮಾರ್ಚ್ 2020 ಹಾಗೂ ನಂತರದ ವೇತನ ಪಾವತಿ ಮಾತ್ರ ನೀಡತಕ್ಕದ್ದು, ಹಿಂದಿನ ಅವಧಿಯ ವೇತನವನ್ನು ಆರ್ಥಿಕ ಇಲಾಖೆಯಿಂದ ಲಭ್ಯಪಡಿಸಿಕೊಂಡು ಬಾಕಿ ವೇತನವನ್ನು ಮಾತ್ರ ಸೆಳೆಯತಕ್ಕದ್ದು, ಇದನ್ನು ಉಲ್ಲಂಘಿಸಿದಲ್ಲಿ ಸಂಬಂಧಿಸಿದ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ಶಿಸ್ತಿನ ಕ್ರಮಕ್ಕೆ ಕಾರಣರಾಗುತ್ತಾರೆ. ಆರ್ಥಿಕ ಇಲಾಖೆಯ ಆಇ 06 ಬಿಪಿಇ 2019, ದಿನಾಂಕ: 03.01.2020ರ ಸುತ್ತೋಲೆಯನ್ವಯ ಎಲ್ಲಾ ಅಧಿಕಾರಿಗಳು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ.</u>**

ಮೇಲ್ಕಂಡ ಎಲ್ಲಾ ಅಂಶಗಳನ್ನು ಸಂಬಂಧಪಟ್ಟವರು ಗಮನಿಸಿ ಕ್ರಮವಹಿಸತಕ್ಕದ್ದು. 2019–20ನೇ ಆರ್ಥಿಕ ವರ್ಷದಲ್ಲಿ ಇಲಾಖಾವಾರು ಕೋರಿಕೆಯಂತೆ ಈಗಾಗಲೇ ರಾಜ್ಯ / ಜಿಲ್ಲಾ ವಲಯಗಳಲ್ಲಿ ಹೆಚ್ಚುವರಿ ಅನುದಾನ ನೀಡಲಾಗಿದೆ. ಡಿ.ಡಿ.ಒ.ಗಳಿಗೆ / ಇಲಾಖಾಧಿಕಾರಿಗಳು ಮಾರ್ಚ್–2020ರೊಳಗೆ 2019–20ನೇ ಸಾಲಿನ ಫೆಬ್ರವರಿ ತಿಂಗಳ ವರೆಗಿನ ವೇತನವನ್ನು ಖಜಾನೆಯಿಂದ ಸೆಳೆದು ವಿತರಿಸಲು ಸೂಚಿಸಿದೆ. 2020–21ನೇ ಸಾಲಿನಲ್ಲಿ ಯಾವುದೇ ಕಾರಣಕ್ಕೂ ಸಿಬ್ಬಂದಿಯವರ ತಿಂಗಳ ವೇತನವನ್ನು ಸೆಳೆಯಲು ವಿಳಂಬ ಮಾಡತಕ್ಕದ್ದಲ್ಲ. ಕ್ಲುಪ್ತ ವೇಳೆಯಲ್ಲಿ ವೇತನ ಬಿಲ್ಲುಗಳನ್ನು ತೀರುವಳಿಗೊಳಿಸತಕ್ಕದ್ದು. 2020–21ನೇ ಸಾಲಿನಲ್ಲಿ ಯಾವುದೇ ಕಾರಣದಿಂದ ಹಿಂದಿನ ಬಾಕಿ ಅನುದಾನ ಹೆಚ್ಚುವರಿಯಾಗಿ ನೀಡಲಾಗುವುದಿಲ್ಲ. ಒಂದೊಮ್ಮೆ, ಯಾವುದೇ ಕಾರಣದಿಂದ ಈ ರೀತಿ ಹೆಚ್ಚುವರಿ ಅನುದಾನವನ್ನು ಕೋರಿದ ಪಕ್ಷದಲ್ಲಿ ಹಿಂದಿನ ಸಾಲಿನಲ್ಲಿ ಏನಾದರೂ ವೇತನ ಲೆಕ್ಕಶೀರ್ಷಿಕೆಯಡಿ ಉಳಿತಾಯ (Savings) ಆಗಿದ್ದರೆ ಅಂತಹ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳೇ ಪೂರ್ಣ ಹೊಣೆಗಾರರಾಗಿರುತ್ತಾರೆ, ಅಲ್ಲದೆ ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ವಯ ಶಿಸ್ತಿನ ಕ್ರಮಕ್ಕೆ ಗುರಿಯಾಗುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.

ಶುಭಾಶಯಗಳೊಂದಿಗೆ,

ತಮ್ಮ ವಿಶ್ವಾಸಿ,

(ಐ.ಎಸ್.ಎನ್. ಪ್ರಸಾದ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ.

**ಇವರುಗಳಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು
2. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
3. ಎಲ್ಲಾ ಜಿಲ್ಲಾಧಿಕಾರಿಗಳು.
4. ಎಲ್ಲಾ ಇಲಾಖಾ ಮುಖ್ಯಸ್ಥರು
5. ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
6. ಆರ್ಥಿಕ ಇಲಾಖೆಯ ಎಲ್ಲಾ ವಿಶೇಷ / ಜಂಟಿ / ಉಪ / ಅಧೀನ ಕಾರ್ಯದರ್ಶಿಗಳು.
7. ಕಛೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.
8. ಶಾಖಾ ರಕ್ಷ ಕಡತ.